# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 2294 |
| ಸದಸ್ಯರ ಹೆಸರು | : | ಶ್ರೀ ಶಿವಕುಮಾರ್ ಕೆ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 26.03.2026 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿರವರು |

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಬೆಂಗಳೂರು ನಗರದ ವ್ಯಾಪ್ತಿ ಮತ್ತು ಜನಸಂಖ್ಯೆ ಗಣನೀಯವಾಗಿ ಹೆಚ್ಚಾಗಿರುವುದರಿಂದ ಬಿ.ಡಿ.ಎ ನಿವೇಶನಗಳಿಗೆ ಇರುವ ಬೇಡಿಕೆ ಎಷ್ಟು; ಪ್ರಸ್ತುತ ನಿವೇಶನಗಳಿಗಾಗಿ ಸಲ್ಲಿಕೆಯಾಗಿರುವ ಬಾಕಿ ಅರ್ಜಿಗಳ ಸಂಖ್ಯೆ ಎಷ್ಟು; (ಸಂಪೂರ್ಣ ವಿವರ ನೀಡುವುದು)</td><td>ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವವರ ಪೈಕಿ, ನಿವೇಶನ ಹಂಚಿಕೆಯಾದವರನ್ನು ಹೊರತುಪಡಿಸಿ, ಈ ಕೆಳಕಂಡಂತೆ ಅರ್ಜಿಗಳು ಬಾಕಿ ಇರುತ್ತವೆ:-
<table>
<tr><th>ಅವಧಿ</th><th>ಬಾಕಿ ಇರುವ ಅರ್ಜಿಗಳು</th></tr>
<tr><td>2016</td><td>26,384</td></tr>
<tr><td>2018</td><td>10,402</td></tr>
<tr><td>ಒಟ್ಟು</td><td>36,786</td></tr>
</table></td></tr>
<tr><td>(ಆ)</td><td>ಹೆಚ್ಚುತ್ತಿರುವ ಈ ಬೇಡಿಕೆಯನ್ನು ಪೂರೈಸಲು ಸರ್ಕಾರವು ಹೊಸದಾಗಿ ಎಷ್ಟು ಬಡಾವಣೆಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಈ ಬಡಾವಣೆಗಳ ಅಭಿವೃದ್ಧಿ ಪ್ರಕ್ರಿಯೆಯು ಪ್ರಸ್ತುತ ಯಾವ ಹಂತದಲ್ಲಿದೆ ಹೊಸ ಬಡಾವಣೆಗಳ ನಿರ್ಮಾಣಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಈಗಾಗಲೇ ಗುರುತು ಮಾಡಲಾಗಿದೆ ಹಾಗೂ ವಶಪಡಿಸಿಕೊಳ್ಳಲಾಗಿದೆ;</td><td>• ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನಗಳಿಗೆ ಹೆಚ್ಚಿನ ಬೇಡಿಕೆಯಿರುವುದರಿಂದ ಈಗಾಗಲೇ ಡಾ:ಕೆ.ಶಿವರಾಮ ಕಾರಂತ ಬಡಾವಣೆಯನ್ನು 3837ಎ & 5.25ಗುಂಟೆ ಜಮೀನಿನಲ್ಲಿ ನಿರ್ಮಿಸುತ್ತಿದ್ದು, ಬಡಾವಣೆಯ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿದೆ.<br>• ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪಿ.ಆರ್.ಆರ್ ಭಾಗ-1)ಕ್ಕೆ ಹೊಂದಿಕೊಂಡಂತೆ 05 ಹೊಸ ಬಡಾವಣೆಗಳನ್ನು ಸುಮಾರು 6,900 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದು, ಸರ್ವೆ ಕಾರ್ಯ ಪ್ರಗತಿಯಲ್ಲಿರುತ್ತದೆ.<br>• ಪೆರಿಫೆರಲ್ ರಿಂಗ್ ರಸ್ತೆ-2ಗೆ ಹೊಂದಿಕೊಂಡಂತೆ 06 ಹೊಸ ಬಡಾವಣೆಗಳನ್ನು ಸುಮಾರು 6,200 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಲು ಪ್ರಾಥಮಿಕ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗುತ್ತಿದೆ.</td></tr>
<tr><td>(ಇ)</td><td>ಬಡಾವಣೆಗಳ ನಿರ್ಮಾಣಕ್ಕೆ ಭೂಮಿಯ ಬೆಲೆ ವಿಪರೀತವಾಗಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಬಿ.ಡಿ.ಎ ವತಿಯಿಂದ ಎಷ್ಟು ವಸತಿ ಸಮುಚ್ಚಯಗಳನ್ನು (Apartments) ಎಲ್ಲೆಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಈ ಅಪಾರ್ಟ್‌ಮೆಂಟ್ ಗಳ ನಿರ್ಮಾಣಕ್ಕೆ ತಗಲುತ್ತಿರುವ ವೆಚ್ಚ ಮತ್ತು ನಿಗದಿಪಡಿಸಲಾದ ಮಾರಾಟ ದರ ಎಷ್ಟು;</td><td>ಪ್ರಸ್ತುತ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಿಸುತ್ತಿರುವ ಹೊಸ ವಸತಿ ಯೋಜನೆಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.</td></tr>
</table>

| | | |
|---|---|---|
| ಈ) | ಬಿ.ಡಿ.ಎ ಅಭಿವೃದ್ಧಿಪಡಿಸುವ ಈ ಹೊಸ ಬಡಾವಣೆ ಮತ್ತು ಫ್ಲ್ಯಾಟ್‌ಗಳಲ್ಲಿ ಅರ್ಹ ಫಲಾನುಭವಿಗಳಿಗೆ ನೀಡಲಾಗುವ ರಿಯಾಯಿತಿ ದರ (Concession rate) ಮತ್ತು ಒದಗಿಸಲಾಗುವ ಮೂಲಭೂತ ಅವಶ್ಯಕತೆಗಳಾದ ನೀರು, ಒಳಚರಂಡಿ ಮತ್ತು ವಿದ್ಯುತ್ ಸೌಲಭ್ಯಗಳ ವಿವರವೇನು: ಈ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು: | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸುವ ಬಡಾವಣೆಗಳ ನಿವೇಶನ ಹಂಚಿಕೆಯಲ್ಲಿ ಈ ಕೆಳಕಂಡಂತೆ ಮೀಸಲಾತಿಯನ್ನು ನಿಗದಿಪಡಿಸಲಾಗಿದೆ. ಆದರೆ, ನಿವೇಶನ ದರದಲ್ಲಿ ಯಾವುದೇ ರಿಯಾಯಿತಿ ನೀಡುತ್ತಿರುವುದಿಲ್ಲ.<br>1.ಪರಿಶಿಷ್ಟ ಜಾತಿ ಶೇ.15<br>2.ಪರಿಶಿಷ್ಟ ಪಂಗಡ ಶೇ. 3 |
| ಉ) | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಅರ್ಜಿದಾರರಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿ.ಡಿ.ಎ) ಅಭಿವೃದ್ಧಿಪಡಿಸುವ ಬಡಾವಣೆಗಳಲ್ಲಿ ನಿವೇಶನ (Sites) ಮತ್ತು ಫ್ಲ್ಯಾಟ್ ಗಳ (Apartments) ಹಂಚಿಕೆಯಲ್ಲಿ ಪ್ರಸುತ ನೀಡುತ್ತಿರುವ ರಿಯಾಯಿತಿ ದರ ಹಾಗೂ ಮೀಸಲಾತಿ ಪ್ರಮಾಣದ ಮಾನದಂಡಗಳೇನು: (ವಿವರವಾದ ಮಾಹಿತಿ ನೀಡುವುದು) | • ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಫ್ಲ್ಯಾಟ್ ಹಂಚಿಕೆಯಲ್ಲಿ ಯಾವುದೇ ಮೀಸಲಾತಿಯನ್ನು ನಿಗದಿಪಡಿಸಿರುವುದಿಲ್ಲ ಹಾಗೂ ಫ್ಲ್ಯಾಟ್‌ಗಳನ್ನು ಯಾವುದೇ ರಿಯಾಯತಿ ದರದಲ್ಲಿ ಹಂಚಿಕೆ ಮಾಡುತ್ತಿಲ್ಲ. ಲಭ್ಯವಿರುವ ಫ್ಲ್ಯಾಟ್ ಹಂಚಿಕೆ ಕೋರಿ ಪ್ರಾರಂಭಿಕ ಠೇವಣಿಯೊಂದಿಗೆ ಸಾಮಾನ್ಯ ವರ್ಗದವರಿಗೆ ಫ್ಲ್ಯಾಟ್ ನ ಮೊತ್ತದಲ್ಲಿ ಶೇ.12.5 ರಷ್ಟು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಶೇ.5ರಷ್ಟು ಪ್ರಾರಂಭಿಕ ಠೇವಣಿಯೊಂದಿಗೆ ಮೊದಲು ಅರ್ಜಿ ಸಲ್ಲಿಸಿದವರಿಗೆ ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗುತ್ತಿದೆ.<br>• ಹೊಸದಾಗಿ ನಿರ್ಮಿಸಲಾಗುವ ಬಡಾವಣೆ ಮತ್ತು ಫ್ಲ್ಯಾಟ್‌ಗಳಿಗೆ ಒದಗಿಸಲಾಗುವ ಮೂಲಭೂತ ಅವಶ್ಯಕತೆಗಳಾದ ನೀರು, ಒಳಚರಂಡಿ ಮತ್ತು ವಿದ್ಯುತ್ ಸೌಲಭ್ಯಗಳ ವಿವರಗಳು ಕೆಳಕಂಡತಿವೆ:<br>**ನೀರು :** ಪ್ರಸ್ತುತ ಕೊಳವೆ ಬಾವಿಗಳನ್ನು ಪ್ರಾಧಿಕಾರದಿಂದ ಅಳವಡಿಸಲಾಗಿರುತ್ತದೆ ಮತ್ತು ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಂಪರ್ಕವು ಲಭ್ಯವಾದಾಗ ಸಂಪರ್ಕ ಕಲ್ಪಿಸಿಕೊಡಲಾಗುತ್ತಿದೆ.<br>**ಒಳಚರಂಡಿ :** ಪ್ರಾಧಿಕಾರದಿಂದ ಪ್ರತಿ ವಸತಿ ಸಮುಚ್ಚಯದಲ್ಲಿ ಸೂಕ್ತ ಸಾಮರ್ಥ್ಯವುಳ್ಳ STP ಯನ್ನು ಅಳವಡಿಸಿ, ಸದರಿ STP ಗಳಿಂದ ಬರುವ ಸಂಸ್ಕರಿಸಿದ ನೀರನ್ನು Flush Tanks ಹಾಗೂ ಉದ್ಯಾನವನಗಳಿಗೆ ಉಪಯೋಗಿಸಲಾಗುವುದು.<br>**ವಿದ್ಯುತ್:** ಬೆಸ್ಕಾಂ ರವರಿಂದ ನಿಯಮಾನುಸಾರ ಶಾಶ್ವತ ವಿದ್ಯುತ್ ಸೌಲಭ್ಯವನ್ನು ಪಡೆಯಲಾಗುತ್ತಿದೆ. |
| ಊ) | ನಿವೇಶನಗಳಿಗೆ ಮತ್ತು ಅಪಾರ್ಟ್ ಮೆಂಟ್ ಗಳಿಗೆ ನೀಡುತ್ತಿರುವ ರಿಯಾಯಿತಿ ಎಷ್ಟು ಈಗಾಗಲೇ ಕಟ್ಟಿರುವ ಅಪಾರ್ಟ್ ಮೆಂಟ್ ಗಳಲ್ಲಿ ಎಷ್ಟು ರಿಯಾಯಿತಿಯನ್ನು ನೀಡಿದ್ದೀರಿ? (ವಿವರಗಳನ್ನು ಒದಗಿಸುವುದು. | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿವೇಶನ ಮತ್ತು ಅಪಾರ್ಟ್ ಮೆಂಟ್ ಗಳಿಗೆ ಯಾವುದೇ ರೀತಿಯ ರಿಯಾಯಿತಿ ನೀಡುತ್ತಿರುವುದಿಲ್ಲ. |

**ಸಂಖ್ಯೆ: ನಅಇ 158 ಬೆಂಲಅಸೇ 2026(ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ

ಅನುಬಂಧ-1

## ಪ್ರಸ್ತುತ ಪ್ರಗತಿಯಲ್ಲಿರುವ ವಸತಿ ಯೋಜನೆಗಳ ವಿವರ

| ಕ್ರ.ಸಂ | ಯೋಜನೆ | ಗುತ್ತಿಗೆ ಮೊತ್ತ (ರೂ.ಕೋಟಿಗಳಲ್ಲಿ) | ಷರಾ |
|---|---|---|---|
| 1 | ಕೋನದಾಸಪುರ ಹಂತ-1 | 842.00 | ಈ ವಸತಿ ಯೋಜನೆಗಳು ಪ್ರಗತಿಯಲ್ಲಿದ್ದು, ಯೋಜನೆಯ ಮುಕ್ತಾಯದ ನಂತರ ಎಲ್ಲಾ ಖರ್ಚು ಹಾಗೂ ಭೂಮಿಯ ಬೆಲೆ ಸಹಿತ ಲೆಕ್ಕಾಚಾರ ಮಾಡಿ ದರಗಳನ್ನು ನಿರ್ಧರಿಸಿ ಮಂಡಳಿ ಸಭೆಯಲ್ಲಿ ಅನುಮೋದನೆ ಪಡೆಯಲಾಗುತ್ತಿದೆ. |
| 2 | ಕೋನದಾಸಪುರ ಹಂತ-3 | 442.26 | |
| 3 | ವಳಗೇರಹಳ್ಳಿ ಹಂತ-7 | 104.54 | |
| 4 | ಕೆಂಚನಪುರ | 387.04 | |
| 5 | ಕಾಳತಮ್ಮನಹಳ್ಳಿ | 652.42 | |
| 6 | ದೊಡ್ಡತೋಗೂರು | 1320.90 | |

Shanthalatajamath